**ದಿನಾಂಕಃ22-09-2023 ರಂದು ಪ್ರಮಾಣ ವಚನ ಮಾಡಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಆರೋಪಿತರ ಪರಃ ಜೆಕೆಎಸ್. ವಕೀಲರಿಂದಃ**

ಒ.ಎಸ್.304/2015 1 ನೇ ಅಧಿಕ ಸಿವಿಲ್ ನ್ಯಾಯಾಲಯದಲ್ಲಿ ನಡೆಯುತ್ತಿದೆ ಎಂದರೆ ಸರಿ. ಆ ದಾವೆಯಲ್ಲಿ ನಾನು ವಾದಿಯಾಗಿರುತ್ತೇನೆ ಎಂದರೆ ಸರಿ. ಹಕ್ಕುಪತ್ರವು ದಿಲ್ ಶಾದ್ ರವರ ಹೆಸರಿನಲ್ಲಿರುತ್ತದೆ ಎಂದರೆ, ನನ್ನ ತಾಯಿಯ ಹೆಸರಿನಲ್ಲಿರುತ್ತದೆ. ಹಕ್ಕು ಪತ್ರದಲ್ಲಿರುವ ಹೆಸರು ನನ್ನ ತಾಯಿಯ ಹೆಸರಲ್ಲ, ಅದು ನನ್ನ ಅಕ್ಕನ ಹೆಸರು ಎಂದರೆ ಸರಿಯಲ್ಲ. ನಮ್ಮ ತಾಯಿ ತೀರಿಕೊಂಡು 30 ವರ್ಷಗಳಿಗಿಂತ ಹೆಚ್ಚಾಗಿರುತ್ತದೆ. ನಮ್ಮ ತಾಯಿ ತೀರಿಕೆಜಾಂಡ ಬಗ್ಗೆ ಮಸೀದಿಯಲ್ಲಿ ದಾಖಲೆ ಇದ್ದು ಅದನ್ನು ಹಾಜರುಪಡಿಸಬಹುದು ಎಂದರೆ, ದಾಖಲೆಯನ್ನು ಕೊಡುವುದಿಲ್ಲ. ನಿಮ್ಮ ತಾಯಿಯ ಭಾವಚಿತ್ರವನ್ನು ಹಾಜರುಪಡಿಸಬಹುದೇ ಎಂದರೆ, ನಮ್ಮ ತಾಯಿಯ ಭಾವಚಿತ್ರ ಇರುವುದಿಲ್ಲ. ನಿಮ್ಮ ಕುಟುಂಬದ ಸದಸ್ಯರ ಫೋಟೋ ಹಾಜರುಪಡಿಸಬಹುದೇ ಎಂದರೆ, ಆ ರೀತಿ ಫೋಟೋ ಇರುವುದಿಲ್ಲ. ನಮ್ಮ ತಾಯಿಯ ಚುನಾವಣಾ ಗುರುತಿನ ಚೀಟಿ ಇರುವುದಿಲ್ಲ. ನಮ್ಮ ತಾಯಿಯ ರೇಷನ್ ಕಾರ್ಡ್ ಹಾಜರುಮಾಡಲು ಆಗುವುದಿಲ್ಲ. ನನ್ನ ತಾಯಿಯ ಅಣ್ಣ ತಮ್ಮಂದಿರು ಈಗ ಇರುವುದಿಲ್ಲ. ನನ್ನ ತಾಯಿಯ ಅಣ್ಣತಮ್ಮಂದಿರು ಮಂಗಳೂರಿನಲ್ಲಿ ಇರುತ್ತಾರೆ. ನನ್ನ ತಾಯಿಯ ತವರು ಮನೆಯಲ್ಲಿ ನಮ್ಮ ತಾಯಿ ಇದ್ದ ಬಗ್ಗೆ ದಾಖಲೆ ಹಾಜರುಪಡಿಸಲಾಗುವುದಿಲ್ಲ. ನನ್ನ ತಾಯಿಯ ಮಾವ ಇರುತ್ತಾರೆ, ಅವರನ್ನು ಕರೆದುಕೊಂಡು ಬಂದು ಸಾಕ್ಷಿಯನ್ನಾಗಿ ಮಾಡಲಾಗುವುದಿಲ್ಲ. ನನ್ನ ಮಾವನ ಮಕ್ಕಳ ಹೆಸರು ಗೊತ್ತು, ಆದರೆ ವಿಳಾಸ ಗೊತ್ತಿಲ್ಲ. ನಮ್ಮ ತಾಯಿಯ ಚಿಕ್ಕಮ್ಮ ಈಗ ಇರುವುದಿಲ್ಲ. ನನ್ನ ತಾಯಿಯ ಚಿಕ್ಕಮ್ಮನ ಮಕ್ಕಳು ಇರುತ್ತಾರೆ, ಇವರ ವಿಳಾಸವನ್ನು ಹೇಳಲಿಕ್ಕಾಗುವುದಿಲ್ಲ. ನನ್ನ ತಂದೆಯ ಭಾವಚಿತ್ರವನ್ನು ಹಾಜರುಪಡಿಸಲು ಆಗುವುದಿಲ್ಲ. ನನ್ನ ತಂದೆ ಗವನಹಳ್ಳಿಯಲ್ಲಿ ತೀರಿಕೊಂಡಿರುತ್ತಾರೆ. ನಮ್ಮ ಧರ್ಮದಲ್ಲಿ ಮೃತರಾದವರ ಗೋರಿಯ ಮೇಲೆ ಕಲ್ಲಿನಲ್ಲಿ ಅವರ ಹೆಸರನ್ನು ಬರೆಸಿರುತ್ತಾರೆ ಎಂದರೆ ಸರಿ. ಮಸೀದಿಯಲ್ಲಿ ಮೃತರಾದವರ ಹೆಸರು ಇರುತ್ತದೆ ಎಂದರೆ ಸರಿ. ನನ್ನ ಅಕ್ಕ, ಭಾವನವರು ಇದ್ದರೂ ಸಹಾ ಸತ್ತು ಹೋಗಿದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಸೀದಿಯವರು ಅಬ್ದುಲ್ ಬಷೀರ್ ಮತ್ತು ದಿಲ್ ಶಾದ್ ರವರು ಜೀವಂತ ಇರುತ್ತಾರೆ ಎಂದು ಪ್ರಮಾಣಪತ್ರ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ಖರ್ಚು ಸಮೇತ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓಃಹೇಃಕೇಃಸಃಇಃಎಃಒಃ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿಜೆಎಂ, ಚಿಕ್ಕಮಗಳೂರು.